(ಆ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ?

(ಇ) ಸದರಿ ಕಟ್ಟಡ ಬಾಡಿಗೆ ಕೊಟ್ಟ ನಿಯಮಗಳಿಗೆ ವಿರುದ್ಧವಾಗಿ ಆಡಳಿತ ಮಂಡಲಿ ವರ್ತಿಸಿದ್ದರ ಬಗ್ಗೆ ನಗರಸಭೆ, ಬಿಲ್ಡಿಂಗ್ ಲಾಭಕ್ಕೆ ತೆಗೆದುಕೊಳ್ಳಲಿಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದಾರೆ, ಹಾಗೂ ಇದುವರೆಗೂ ಕಬಜಾ ಪಡೆದುಕೊಂಡಿರುವುದಿಲ್ಲದಿರಲು ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

(ಆ) ಕಟ್ಟಡವನ್ನು ಸಬ್ ಲೀಸ್ ಮಾಡಿರುವ ವಿಷಯ ಪುರಸಭೆಯ ಗಮನಕ್ಕೆ ಬಂದಿದೆ.

(ಆ) ರಾಣಿಬೆನ್ನೂರು ಪುರಸಭೆಯು ಕೋರ್ಟಿನಲ್ಲಿ ಖುಲ್ಲಾ ಮಾಡಿಸಲು ದಾವೆ ಹೂಡಿದೆ.

(ಇ) ಕೋರ್ಟಿನಲ್ಲಿ ಸ್ವಾಧೀನ ಪಡೆಯಲು ಹೂಡಿದ ದಾವೆ ಇನ್ನೂ ನಡೆಯುತ್ತಿರುವುದರಿಂದ ಕಬಜಾ ತೆಗೆದುಕೊಳ್ಳಲು ಆಗಿಲ್ಲ.

ಶಿರಾ ನಗರದಲ್ಲಿ ಕೊಳಚೆ ನಿರ್ಮೂಲನ ಮಾಡುವ ಬಗ್ಗೆ

೨೬೮ (೧೦೨) ಶ್ರೀ ಸಿ. ಮೂಡ್ಲೇಗೌಡ (ಶಿರಾ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಶಿರಾ ನಗರದಲ್ಲಿ ಕೊಳಚೆ ನಿರ್ಮೂಲನ ವಿಚಾರದಲ್ಲಿ ಸರ್ಕಾರದವರು ಯಾವ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದಾರೆ ?

ಆ) ತೀರ ಇಕ್ಕಟ್ಟಾದ ಕೊಳಚೆ ಪ್ರದೇಶಗಳಲ್ಲಿನ ನಾಗರೀಕರಿಗೆ ಬೇರೆ ಕಡೆ ವಸತಿ ಗೃಹಗಳ ನಿರ್ಮಾಣ ಮಾಡಲು ಸರ್ಕಾರದವರು ಯೋಚಿಸಿದ್ದಾರೆಯೇ ? ಈ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರದ ಮಂತ್ರಿ ಗಳು).—

ಅ) ಶಿರಾ ಪುರಸಭೆಯ ಪರಿಮಿತಿಯಲ್ಲಿ ೫ ಕೊಳಚೆ ಪ್ರದೇಶಗಳನ್ನು ಇತ್ತೀಚೆಗೆ ಗುರುತಿಸ ಲಾಗಿದೆ. ಇವುಗಳನ್ನು ಕೊಳಚೆ ಪ್ರದೇಶವೆಂದು ಘೋಷಿಸುವ ವಿಚಾರವು ಪರಿಶೀಲನೆಯಲ್ಲಿದೆ. ಇವುಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಿದಲ್ಲಿ ಈ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಈ ಬಗ್ಗೆ ಶಿರಾ ಪುರಸಭೆಗೆ ಖಾಲಿ ಜಮೀನು ನೀಡುವಂತೆ ಕೋರಲಾಗಿದೆ. ಪುರಸಭೆಯು ಸೂಕ್ತವಾದ ಖಾಲಿ ಜಮೀನನ್ನು ನೀಡಿದಲ್ಲಿ ವಸತಿ ಗೃಹಗಳನ್ನು ಕಟ್ಟುವುದರ ಬಗ್ಗೆ ಪರಿಶೀಲಿಸಲಾಗು ವುದು.

ಮೈಸೂರು ಜಿಲ್ಲಾ ದೇವಲಾಪುರ ಗ್ರಾಮದ ಸರ್ವೆ ನಂ. ೪೨ರಲ್ಲಿ ದಲಿತ ಕೃಷಿ ಕಾರ್ಮಿಕರು ಬೇಸಾಯ ಮಾಡಿದ ಬೆಳೆಯು ನಾಶದ ಬಗ್ಗೆ

೨೬೯ (೨೮೯) ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) ಮತ್ತು ಶ್ರೀ ಗೊವಿಂದ ಪಿ. ಒಡೆಯ ರಾಜ್ (ಕಮಲಾಪುರ).—ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:—

ಅ) ಮೈಸೂರು ಜಿಲ್ಲಾ ಹೆಗ್ಗಡದೇವನಕೋಟೆ ತಾಲ್ಲೂಕಿನ ನಂದಳಿಕೆ ಹೋಬಳಿ ದೇವಲಾಪುರ ಗ್ರಾಮದ ವ್ಯಾಪ್ತಿಗೆ ಸೇರಿದ ಸರ್ವೆ ನಂಬರ್ ೪೨ರಲ್ಲಿ ದೇವಲಾಪುರ ಮತ್ತು ಇನ್ನುಳಿದ ೮ ಹಳ್ಳಿ ಗಳ ಎಲ್ಲಾ ಜಾತಿಯ ಭೂ ಹೀನ ದಲಿತರು ಸಾಗುವಳಿ ಮಾಡುತ್ತಿದ್ದುದು ನಿಜವೆ, ಅಲ್ಲದೆ ಸದರೀ ಸರ್ವೆ ನಂಬರಿನಲ್ಲಿ ೧೦–೨೦ ಎಕರೆ ಜಮೀನುಳ್ಳ ರೈತರು ಕೂಡ ಭೂಮಿಯನ್ನು ಆಕ್ರಮಿಸಿ ಬೇಸಾಯ ಮಾಡುತ್ತಿರುವುದು ನಿಜವೇ?